ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4732/2023

ಪಿ.ಡಬ್ಲ್ಯೂ -04
ಸಿ.ಡಬ್ಲ್ಯೂ-07

ಸಾಕ್ಷಿದಾರನ ಹೆಸರುಃ- ಶೇಕ್ ಇಮ್ರಾನ್
ತಂದೆಯ ಹೆಸರುಃ- ಶೇಕ್ ಫರೀದ್
ವಯಸ್ಸುಃ- 35 ವರ್ಷ
ಉದ್ಯೋಗಃ- ಅಭಕಾರಿ ನಿರೀಕ್ಷಕರು
ವಾಸಃ- ಗುಬ್ಬಿ ವಲಯ

**ಸಾಕ್ಷಿಗೆ ದಿಃ21.01.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು ಜೂನ್ 2017 ರಿಂದ ಎಪ್ರಿಲ್ 2018 ರವೆಗೆ ಅಭಕಾರಿ ಉಪನಿರೀಕ್ಷಕನಾಗಿ ಕುಣಿಗಲ್ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 02.04.2018 ರಂದು ಕರ್ನಾಟಕ ರಾಜ್ಯ ವಿಧಾನ ಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದಾಗ ನಾನು ಕಮಲಾಕರ್ ಹೆಗಡೆಕರ್ ಮತ್ತು ಚಾಸಾ 4 ಅವರೊಂದಿಗೆ ಇಲಾಖಾ ವಾಹನ ಸಂ ಕೆ.ಎ 06-ಜಿ. 0897 ನೇ ದರಲ್ಲಿ ಗುಸ್ತಿನಲ್ಲಿರುವವಾಗ ಮಧ್ಯ ರಾತ್ರಿ ಸುಮಾರು 1.45 ರಿಂದ 2 ಗಂಟೆಯ ಸಮಯದಲ್ಲಿ ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯ ಜಿಡ್ಡಿಗೇರೆ ಪೋಸ್ಟನ ತೆಂಗಿನಮಪಾಳ್ಯದ ಉಮೇಶ್ ಬಿನ್ ಗಂಗಯ್ಯ ಅವರು ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮತ್ತು ಮದ್ಯಹೊಂದಿದ ಬಗ್ಗೆ ಖಚಿತ ಬಾತ್ಮಿ ಬಂದಿದ್ದರ ಮೇರೆಗ ಅಭಕಾರಿ ನೀರಿಕ್ಷಕರನ್ನು ಅಲ್ಲಿ ಬಿಟ್ಟು ನಾನು ಮತ್ತು ಚಾಸಾ 4 ಸದರಿ ಗ್ರಾಮಕ್ಕೆ ತೆರಳಲಾಗಿ ಸದರಿ ಗ್ರಾಮದಲ್ಲಿ ಆ ದಿನ ಊರ ಹಬ್ಬ ಇದ್ದ ಕಾರಣ ಕೆಲವರು ಎಚ್ಚರ ಇದ್ದು ಅವರನ್ನು ನಮಗೆ ಬಂದ ಮಾಹಿತಿಯನ್ನು ತಿಳಿಸಿ ಲಖಿತ ಮನವಿ ಮೂಲಕ ಪಂಚರಾಗಲು ಕೋರಿಕೊಂಡಾಗ ಅವರು ಒಪ್ಪಿಕೊಡಿರುತ್ತಾರೆ.

ನಂತರ ಅವರೊಂದಿಗೆ ಸದರಿ ಉಮೇಶ್ ಬಿನ್ ಗಂಗಯ್ಯ ಅವರ ಮನೆಯ ಬಳಿ ತೆರಳಿದಾಗ ಮನೆಯ ಬಾಗಿಲು ಮುಚ್ಚಿದ್ದು ಬಾಗಿಲು ಬಡಿದು ಅವರಿಗೆ ಎಚ್ಚರಿಸಲಾಗಿ ಒಬ್ಬ ಆಸಾಮಿಯೂ ಬಂದು ಬಾಗಿಲು ತೆರೆದಿದ್ದು ಅವರ ಹೆಸರು ಕೇಳಲಾಗಿ ಉಮೇಶ್ ಬಿನ್ ಲೇಟ್ ಗಂಗಯ್ಯ ಎಂದು ತಿಳಿಸಿರುತ್ತಾನೆ. ಅವರಿಗೆ ಮೇಲಿನ ವಿಷಯವನ್ನು ತಿಳಿಸಿ ಶೋಧಿಸಲು ಶೋಧನಾ ವಾರೆಂಟ್ ನ್ಯಾಯಾಲಯದಿಂದ

ಪಡೆಯಲು ಕಾಲಾವಕಾಶ ಇಲ್ಲದ ಕಾರಣ ನಾನು ಕರ್ನಾಟಕ ಅಭಕಾರಿ ಕಾಯ್ದೆ 1965 ಕಲಂ 54 ರಂತೆ ಸ್ಥಳದಲ್ಲಿಯೇ ಶೋಧನಾ ವಾರೆಂಟ್ ತಯಾರಿಸಿ ಪಂಚರ ಸಹಿ ಪಡೆದು ನಾವುಗಳು ಪರಸ್ಪರ ಅಂಗ ಶೋದನೆ ಮಾಡಿಕೊಂಡು ಮನೆಯನ್ನು ಪ್ರವೇಶಿಸಿರುತ್ತೇವೆ.

ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇದ್ದು ಮೊದಲು 1 ವರಾಂಡ ಇದ್ದು ವರಾಂಡವನ್ನು ಶೋಧಿಸಲಾಗಿ ಏನು ದೊರೆತಿರುವುದಿಲ್ಲ. ನಂತರ ಎಡಭಾಗದಲ್ಲಿ ಶೌಚಾಲಯ ಇದ್ದು ಅಲ್ಲಿ ಸಹ ಶೋದಿಸಲಾಗಿ ಏನು ದೊರೆತಿರುವುದಿಲ್ಲ. ಬಲಬಾಗದಲ್ಲಿ 1 ಕೋಟ್ಟಡಿಇದ್ದು ಅಲ್ಲಿ ಹೋಗಿ ಶೋದಿಸಲಾಗಿ ಅಲ್ಲಿ 2 ದೊಡ್ಡ ಬಕೆಟಗಳು ಇದ್ದು ಅದರಲ್ಲಿ ಮದ್ಯವನ್ನು ಕುಡಿದು ಬಿಡಾಡಿದ ಟೆಟ್ರಾ ಪ್ಯಾಕೇಟಗಳು ಸಿಕ್ಕಿರುತ್ತವೆ. ನಂತರ ಅಲ್ಲಿಂದ ಹೊರತೆ ಬಂದು ಹಾಲಗೆ ಪ್ರವೇಶಿಸಿದ್ದು ದೊಡ್ಡ ಹಾಲ ಇದ್ದು ಹಾಲನ ವಾಯ್ಯುವ ದಿಕ್ಕಿನಲ್ಲಿ 1 ಕೊಟಡಿ ಇದ್ದು ಅಲ್ಲಿ ಶೋದಿಸಲಾಗಿ ಏನು ದೊರತಿರುವುದಿಲ್ಲ. ಹಾಲನ ಈಶಾನ್ಯ ದಕ್ಕಿನಲ್ಲಿ ಅಕ್ಕಿಯನ್ನು ಶೇಖರಿಸುವ ಖಣಜ ಇದ್ದು ಅದರಲ್ಲಿ ಶೋದಿಸಲಾಗಿ 180 ಎಂ.ಎಲ್. ನ 10 ಓಟಿ ವಿಸ್ಕಿ ಟೆಟ್ರಾ ಪ್ಯಾಕೇಟ್ ಗಳು, 180 ಎಂ.ಎಲ್, ನ 3 ಡಿಎಸ್ಪಿ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಮತ್ತು 90 ಎಂ.ಎಲ್. ನ 10 ಓಸಿ ವಿಸ್ಕಿಯ ಟೆಟ್ರಾ ಪ್ಯಾಕೇಟಗಳು ಇದ್ದು ಒಟ್ಟು 3240 ಲೀಟರ ಮದ್ಯ ದೊರೆತಿರುತ್ತೆದೆ. ಇವುಗಳನ್ನು ಹೊಂದಲು ಮತ್ತು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ

ನಂತರ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಮದ್ಯವನ್ನು ಹೊಂದುವುದು ಮತ್ತು ಸಾಗಾಟ ಮಾಡುವುದು ಹೊಂದುವುದು ಕರ್ನಾಟಕ ಅಭಕಾರಿ ಕಾಯ್ದೆಯ ಅಡಿಯಲ್ಲಿ ಅಪರಾದವೆಂದು ತಿಳಿಸಿದ್ದು ನಂತರ ಸದರಿ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಉಮೇಶ್ ಲೇಟ್ ಗಂಗಯ್ಯ 35 ವರ್ಷ ಟೆಲರಿಂಗ್ ವೃತ್ತಿ ತೆಂಗಿನಮರಪಾಳ್ಯವೆಂದು ತಿಳಿಸಿರುತ್ತಾನೆ.

ನಂತರ ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯವನ್ನು ಬಿಳಿ ಬಣ್ಣದ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ ಇಲಾಖಾ ಸೀಲ್ ಸಂ 157 ಅನ್ನು ಹಾಕಲಾಯಿತು. ನಂತರ ಮಾದರಿ ಸಹಿ ಮತ್ತು ಮಾದರಿ ಸೀಲಿನ ನಕಲು ತಯಾರಿಸಿ ಅವುಗಳನ್ನು ಮು. ಮಾ. ಗಳಿಗೆ ಅಂಟಿಸಲಾಯಿತು. ನಂತರ ಸ್ಥಳದಲ್ಲಿ ಮಹಜರನ್ನು ತಯಾರಿಸಿ ಪಂಚರ ಸಹಿ ಪಡೆದು ಆರೋಪಿಯನ್ನು ನಮ್ಮ ವಶಕ್ಕೆ ಪಡೆದು ಪ್ರಕರಣದ ದಾಖಲಿಸಿ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸುವುದಾಗಿ ಹೇಳಿರುತ್ತೇವೆ. ಮಹಜರನ್ನು 2.30 ರಿಂದ 3.45 ಗಂಟೆಯವರೆಗೆ ಉಮೇಶ್ ಅವರ ಮನೆಯ ದೀಪದ ಸಹಾಯದಿಂದ ಬರೆದು ಮುಗಿಸಲಾಯಿತು. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು. ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ಎಫ್.ಐ.ಆರ್ ಅನ್ನು ನಿ.ಪಿ ಎಂದು ಸಹಿಯನ್ನು ನಿ.ಪಿ 2(ಎ) ಎಂದು ಗುರುತಿಸಲಾಯಿತು.

**ಆರೋಪಿ ಪರಃ ಪಾಟೀ ಸವಾಲುಃ ಜಿ.ಎನ್. ವಕೀಲರಿಂದಃ**

ದಿಃ 02.04.2018 ರಂದು ಬಂದ ಮಾಹಿತಿ ಮೊಬೈಲ್ ಮೂಲಕ ಆಗಿರುತ್ತದೆ. ಖಚಿತ ಮಾಹಿತಿ ಬಂದಾಗ ನಾನು ಕುಣಿಗಲ್ ಟೌನಲ್ಲಿದ್ದೆ. ಮಾಹಿತಿ ಬಂದಾಗ ಸುಮಾರು 1.45 ರಿಂದ 2 ಆಗಿತ್ತು. ಮಾಹಿತಿ ಬಂದಾಗ ಅಭಕಾರಿ ನೀರಿಕ್ಷಕರನ್ನು ಅಲ್ಲಿಯೇ ಬಿಟ್ಟು ನಾವು ಹೊರಟಿರುತ್ತೇವೆ. ತೆಂಗಿನಮರದಪಾಳ್ಯ ಕುಣಿಗಲ್ ನಿಂದ 17 ಕೀ ಮೀ ದೂರದಲ್ಲಿದೆ. ನಾವು ರಂಗನಾಥಸ್ವಾಮಿ ಬೆಟ್ಟ, ಗುನ್ನಾಗೆರೆ, ಶೆಟ್ಟಿಬಿಡು ಮಾರ್ಗಾವಾಗಿ ತೆಂಗಿನಮರದಪಾಳ್ಯಕ್ಕೆ ಹೋಗಿರುತ್ತೇವೆ. ಯಾವ ದೇವರ ಊರ ಹಬ್ಬವೆಂದು ನನಗೆ ನೆನಪಿರುವುದಿಲ್ಲ. ಆರೋಪಿಯ ಮನೆಗೆ ಹೋಗುವ ಮೊದಲೆ ಪಂಚರನ್ನು ಬರಮಾಡಿಕೊಂಡಿರುತ್ತೇವೆ. ಅವರಿಗೆ ಲಿಖಿತ ನೋಟಿಸ್‌ನ್ನು ನೀಡಿರುತ್ತೇನೆ.

ನಮಗೆ ಮಾಹಿತಿ ಊರು ಮತ್ತು ವ್ಯಕ್ತಿಯ ಹೆಸರು ಮಾತ್ರ ಹೇಳಿರುತ್ತಾರೆ. ನಾವು ಊರಿಗೆ ಹೋದ ಬಳಿಕ ಸದರಿ ವ್ಯಕ್ತಿಯ ಮನೆ ನಂ ಗೊತ್ತಾಗಿರುತ್ತದೆ. ಪಂಚರಿಗೆ ನೀಡಿದ ನೋಟಿಸನಲ್ಲಿ ಮನೆಯ ಆರ್.ಆರ್.ನಂ. ನಮೂದು ಇದ್ದು ಅದು ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ಮನೆಗೆ ಹೋದಾಗ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಪಂಚರಿಗೆ ನೋಟಿಸನ್ನು ಮನೆಯ ಹತ್ತಿರ ನೀಡಿರುತ್ತೇನೆ.

ಮನೆಯ ಬಾಗಿಲು ಯಾವ ತರಹದ್ದು ಎಂದು ನನಗೆ ನೆನಪಿರುವುದಿಲ್ಲ. ಮನೆಗೆ ಕಾಂಪೌಂಡ ಇತ್ತಾ ಗೇಟ ಇತ್ತಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಮನೆ ಯಾವ ತರಹದ್ದು ಎಂದು ನನಗೆ ನೆನಪಿರುವುದಿಲ್ಲ. ಸದರಿ ಮನೆ ಯಾರಿಗೆ ಸೇರಿದ್ದು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಮನೆಯಲ್ಲಿ ಅವರ ಹೆಂಡತಿ ಮಾತ್ರ ಇದ್ದು ಒಟ್ಟು ಎಷ್ಟು ಜನ ಇದ್ದರು ಎಂದು ನನಗೆ ನೆನಪಿಲ್ಲವೆಂದು ಹೇಳುತ್ತಾರೆ.

ನಾನು ಸ್ಥಳಕ್ಕೆ ಹೋಗಿದ್ದಲ್ಲಿ ನನಗೆ ಎಲ್ಲಾ ಮಾಹಿತಿ ಗೊತ್ತಿರುತ್ತಿತ್ತು ಎಂದರೆ ಸರಿಯಲ್ಲ. ತೆಂಗಿನಮರದಪಾಳ್ಯಕ್ಕೆ ರಂಗನಾಥಸ್ವಾಮಿ ಬೆಟ್ಟ, ಶೆಟ್ಟಿಬಿಡು ಮೂಲಕ ಹೋಗಲು ರಸ್ತೆ ಇರುವುದಿಲ್ಲವೆಂದರೆ ಸರಿಯಲ್ಲ. ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಯಾವ ಊರ ಹಬ್ಬವೂ ಇರಲಿಲ್ಲವೆಂದರೆ ಸರಿಯಲ್ಲ. ಉಮೇಶ್ ಅವರು ಅಕ್ರಮವಾಗಿ ಮದ್ಯ ಹೊಂದಿದ ಬಗ್ಗೆಮಾಹಿತಿ ಬಂದಿಲ್ಲವೆಂದರೆ ಸರಿಯಲ್ಲ. ಚುನಾವಣಾ ನೀತಿ ಸಂಹಿತೆ ಜಾರಿ ಇದ್ದ ಕಾರಣ ನಮ್ಮ ಮೇಲಾಧಿಕಾರಿಗಳ ಒತ್ತಡಕ್ಕೆ ಮಣಿದು ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 2 ಬಕೆಟನಷ್ಟು ಮದ್ಯದ ಖಾಲಿ ಟೆಟ್ರಾ ಪ್ಯಾಕೇಟಗಳನ್ನು ನಾವು ವಶಕ್ಕೆ ಪಡೆದಿರುವುದಿಲ್ಲ. ಸ್ಥಳದಲ್ಲಿ ಅಂತಹ ಯಾವುದೇ ಟೆಟ್ರಾ ಪ್ಯಾಕೇಟಗಳು ಇರಲಿಲ್ಲ ಆದ ಕಾರಣ ನಾವು ವಶಪಡಿಸಿಕೊಂಡಿಲ್ಲವೆಂದರೆ ಸಾಕ್ಷಿ ಖಾಲಿ ಟೆಟ್ರಾಪ್ಯಾಕೇಟ ಇದ್ದು ನಮಗೆ ಅವಶ್ಯಕತೆ ಇಲ್ಲದ ಕಾರಣ ನಾವು ವಶಪಡಿಸಿಕೊಂಡಿಲ್ಲವೆಂದು ಹೇಳುತ್ತಾರೆ.

ಪಂಚರಿಗೆ ನಾವು ಯಾವುದೇ ಲಿಖಿತ ನೋಟಿಸ್ ನೀಡಿಲ್ಲವೆಂದರೆ ಸರಿಯಲ್ಲ. ಪಂಚರು ಸ್ಥಳಕ್ಕೆ ಬಂದಿರಲಿಲ್ಲವೆಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಕುಳಿತುಕೊಂಡು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಮು. ಮಾ. ಗಳನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲವೆಂದರೆ ಸರಿಯಲ್ಲ. ಆರೋಪಿತನಿಗೂ ಮು. ಮಾ. ಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಬೇರೊಂದು ಪ್ರಕರಣದ ಮು. ಮಾ. ಗಳನ್ನು ತೋರಿಸಿ ಈ ಪ್ರಕರಣದಲ್ಲಿ ಆರೋಪಿತನ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**